ಓ.ಎಸ್. ನಂಬರ:-110 /2023

ಪಿ.ಢಬ್ಲೂ-:-1 : ಗುರುಬಸ್ಸಯ್ಯ ತಂದೆ ಬಸ್ಸಯ್ಯ ಹಿರೇಮಠ

ದಿನಾಂಕ:- 19-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಪಾಟೀ ಸವಾಲು: ಶ್ರೀ. ಪಿ ಬಿ ಪಿ ವಕೀಲರಿಂದ:-***

ನನ್ನ ಅಜ್ಜನ ಹೆಸರು ಮಲಕಾಜಯ್ಯ ಆಗಿರುತ್ತದೆ. ಅವರಿಗೆ ಬಸ್ಸಯ್ಯ ಮತ್ತು ಈರಯ್ಯ ಎಂಬ ೨ ಜನ ಮಕ್ಕಳು ಇರುತ್ತಾರೆ. ಬಸ್ಸಯ್ಯರವರಿಗೆ ವಾದಿಯರು ೩ ಜನ ಮಕ್ಕಳಾಗಿರುತ್ತಾರೆ ಎಂದರೆ ಸರಿ. ಈರಯ್ಯರವರಿಗೆ ೧ ರಿಂದ ೪ನೇ ಪ್ರತಿವಾದಿಗಳು ೪ ಜನ ಮಕ್ಕಳು ಎಂದರೆ ಸರಿ. ನನ್ನ ಅಜ್ಜನಾದ ಮಲಕಾಜಯ್ಯನವರಿಗೆ ಸರ್ವೆ ನಂಬರ ೨೨೫ ಮತ್ತು ಸರ್ವೆ ನಂಬರ ೨೨೧ ಎಂಬ ೨ ಜಮೀನುಗಳು ಇದ್ದವು ಎಂದರೆ ಸರಿ. ಸರ್ವೆ ನಂಬರ ೨೨೧ ರಲ್ಲಿ ೮ ಎಕರೆ ೩೫ ಗುಂಟೆ ಮತ್ತು ಸರ್ವೆ ನಂಬರ ೨೨೨ ರಲ್ಲಿ ೨೩ ಎಕರೆ ೧೪ ಗುಂಟೆ ಜಮೀನು ಇದೆ ಎಂದರೆ ಸರಿ. ನನ್ನ ಅಜ್ಜ ಮಲಕಾಜಯ್ಯರವರು ಇರುವಾಗಲೆ ನಮೆಲ್ಲರ ಹೆಸರಿನಲ್ಲಿ ಪಾಲು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

೨. ನಮ್ಮ ಅಜ್ಜ ಮಲಕಾಜಯ್ಯರವರು ಪಾಲು ಮಾಡಿಕೊಟ್ಟಿರುತ್ತಾರೆ ಎಂದರೆಸ ರಿಯಲ್ಲ. ಸಾಕ್ಷಿಯು ಅವರು ಮೃತರಾದ ನಂತರ ಪಾಲು ಆಗಿದೆ ಎನ್ನುತ್ತಾರೆ. ನನ್ನ ಅಜ್ಜ ಮಲಕಾಜಯ್ಯರವರು ಅಂದಾಜು ಮೃತರಾಗಿ ಎಷ್ಟು ವರ್ಷ ಆಯಿತು ಎಂದು ನನಗೆ ಹೇಳಲು ಗೊತ್ತಿಲ್ಲ. ನನ್ನ ಅಜ್ಜ ಪಾಲು ಮಾಡಿ ಸರ್ವೆ ನಂಬರ ೨೨೧ ರಲ್ಲಿ ೪ ಎಕರೆ ೧೭ ಗುಂಟೆ ಜಮೀನನ್ನು ೨ನೇ ವಾದಿ ಶರಣಯ್ಯರವರಿಗೆ

ನೀಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ ೨೨೧ ರಲ್ಲಿ ನನಗೆ ೪ ಎಕರೆ ೧೮ ಗುಂಟೆ ಜಮೀನು ಪಾಲಿಗೆ ಬಂದಿದೆ ಎಂದರೆ ಸರಿ. ಸರ್ವೆ ನಂಬರ ೨೨೨ ರಲ್ಲಿ ೪ ಎಕರೆ ೨೦ ಗುಂಟೆ ಜಮೀನು ನನ್ನ ಅಣ್ಣನಾದ ೧ನೇ ವಾದಿ ಶಿವರುದ್ರಯ್ಯರವರಿಗೆ ಕೂಡಾ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂಬರ ೨೨೨ ರಲ್ಲಿ ೪ ಎಕರೆ ೨೮ ಗುಂಟೆ ಜಮೀನು ಶಂಕರಯ್ಯರವರ ಪಾಲಿಗೆ ಬಂದಿದೆ ಎಂದರೆ ಸರಿ. ಸಾಕ್ಷಿಯು ಸರ್ವೆ ನಂಬರ ೨೨೨ ರಲ್ಲಿ ಜಮೀನು ಚೆನ್ನಾಗಿ ಇದೆ ಮತ್ತು ಸರ್ವೆ ನಂಬರ ೨೨೧ ರ ಜಮೀನು ಕಡಿಮೆ ಫಲವತ್ತತೆ ಇರುವುದರಿಂದ ಸರ್ವೆ ನಂಬರ ೨೨೧ ರಲ್ಲಿ ಕಡಿಮೆ ಪಾಲು ಇಟ್ಟಿರುತ್ತಾರೆ ಎನ್ನುತ್ತಾರೆ. ಸದರಿ ಜಮೀನುಗಳು ಫಲವತ್ತತೆ ಹೆಚ್ಚುಕಡಿಮೆ ಹೊಂದಿರುವ ಕುರಿತು ಬಸ್ಸಯ್ಯ ಮತ್ತು ಈರಯ್ಯರವರ ನಡುವೆ ಯಾವುದೆ ದಾಖಲೆಗಳು ಆಗಿರುವುದಿಲ್ಲ. ಸಾಕ್ಷಿಯು ದಾಖಲೆ ಆಗದ ಕಾರಣವೆ ನ್ಯಾಯಾಲಯಕ್ಕೆ ಬಂದಿರುತ್ತೇವ ಎನ್ನುತ್ತಾರೆ.

೩. ಸರ್ವೆ ನಂಬರ ೨೨೨ ರಲ್ಲಿ ೪ ಎಕರೆ ೨೮ ಗುಂಟೆ ಜಮೀನು ೨ನೇ ಪ್ರತಿವಾದಿ ನಿಂಗಯ್ಯರವರ ಪಾಲಿಗೆ ಕೂಡಾ ಬಂದಿದೆ ಎಂದರೆ ಸರಿ. ಸಾಕ್ಷಿಯು ಅವರು ಒತ್ತಾಯ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ಸರ್ವೆ ನಂಬರ ೨೨೨ ರಲ್ಲಿ ೩ ಮತ್ತು ೪ನೇ ಪ್ರತಿವಾದಿಗಳಿಗೂ ಕೂಡಾ ತಲಾ ೪ ಎಕರೆ ೨೯ ಗುಂಟೆ ಜಮೀನು ಪಾಲಿಗೆ ಬಂದಿದೆ ಎಂದರೆ ಸರಿ. ಸಾಕ್ಷಿಯು ಅವರೂ ಕೂಡಾ ಒತ್ತಾಯ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ೧೯೯೧ ರಲ್ಲಿ ನಮ್ಮ ಪಾಲಿಗೆ ಬಂದ ಸರ್ವೆ ನಂಬರ ೨೨೧ ರ ಜಮೀನಿನಲ್ಲಿ ೬ ಎಕರೆ ೬ ಗುಂಟೆ ಜಮೀನನ್ನು ಸೋಮಣ್ಣ ತಂದೆ ಆನಂದಪ್ಪ ಕುಂಬಾರರವರಿಗೆ

ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ಜಮೀನು ಮಾರಾಟ ಮಾಡುವಾಗ ನನ್ನ ಅಜ್ಜ ಜೀವಿತಾ ಇರಲಿಲ್ಲ ಎಂದರೆ ಸರಿ. ನಮ್ಮ ಪಾಲಿಗೆ ಬಂದ ಜಮೀನಿನಲ್ಲಿ ನಾವು ಸದರಿ ಸೋಮಣ್ಣರವರಿಗೆ ಜಮೀನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ನಾವು ಮಾರಾಟ ಮಾಡಿದ ಜಮೀನಿನಲ್ಲಿ ಈರಯ್ಯರವರ ಮಕ್ಕಳಾದ ಪ್ರತಿವಾದಿಗಳಿಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿ.

೪. ನನ್ನ ಅಣ್ಣನಾದ ೧ನೇ ವಾದಿ ತಮ್ಮ ಪಾಲಿಗೆ ಬಂದ ಸರ್ವೆ ನಂಬರ ೨೨೨ ರ ೪ ಎಕರೆ ೨೦ ಗುಂಟೆ ಜಮೀನನ್ನು ಚಂದ್ರಶೇಖರ ಶ್ರೀಮಂತ ಮಲಗಾಣರವರಿಗೆ ೨೦೦೭ ರಲ್ಲಿ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ನಮ್ಮ ತಂದೆ ಬಸ್ಸಯ್ಯರವರ ಪಾಲಿಗೆ ಬಂದ ಜಮೀನನ್ನು ಅವರ ಮಕ್ಕಳಾದ ನಾವು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಈರಯ್ಯರವರ ಪಾಲಿಗೆ ಬಂದ ಜಮೀನನ್ನು ಹೊಡೆಯುವ ಉದ್ದೇಶದಿಂದ ನಾನು ಒಂದು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾವು ಕೂಡಾ ಸ್ವಾಧೀನದಲ್ಲಿ ಇರುತ್ತೇವೆ ಎನ್ನುತ್ತಾರೆ. ನಾನು ಸ್ವಾಧೀನದಲ್ಲಿ ಇರುತ್ತೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ.

೫. ಪಹಣಿಯಲ್ಲಿ ಪ್ರತಿವಾದಿಗಳ ಹೆಸರು ಅವರ ಪಾಲಿಗೆ ಬಂದ ಜಮೀನಿಗೆ ೧೯೭೫ ರಿಂದ ೨೦೦೦ ದವರೆಗೆ ನಮೂದು ಆಗಿವೆ ಎಂದರೆ ಸಾಕ್ಷಿಯು ಇರಬಹುದು ಅವರು ಅನ್ಯಾಯದಿಂದ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ಕಂಪ್ಯೂಟರ ಪಹಣಿಯಲ್ಲಿ ತಾಂತ್ರಿಕ ಕಾರಣದಿಂದ ಅವರ ಪಾಲಿಗೆ

ಬಂದ ಜಮೀನಿನಲ್ಲಿ ಕಡಿತ ಆಗಿದೆ ಎಂದರೆ ಸಾಕ್ಷಿಯು ಕಂಪ್ಯೂಟರ ಪಹಣಿಯಲ್ಲಿ ಇರುವ ವಿಸ್ತೀರ್ಣವೆ ನಿಜವಾಗಿರುತ್ತದೆ ಎನ್ನುತ್ತಾರೆ. ನಮ್ಮ ಹೆಸರಿನಲ್ಲಿ ಸದರಿ ಕಡಿತವಾದ ಜಮೀನು ಆಗದ ಕಾರಣ ಈ ದಾವೆಯನ್ನು ನಾವು ಹಾಕಿರುತ್ತೇವೆ. ಸದರಿ ಕಡಿತವಾದ ಜಮೀನು ಪ್ರತಿವಾದಿಗಳಿಗೆ ಸಂಬಂಧಿಸಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ನಾವು ಸ್ವಾಧೀನದಲ್ಲಿರುತ್ತೇವೆ ಎನ್ನುತ್ತಾರೆ.

೬. ಪ್ರತಿವಾದಿಗಳ ಜಮೀನಿನ ಪಹಣಿಯಲ್ಲಿ ತಾಂತ್ರಿಕ ದೋಷದಿಂದ ವಿಸ್ತೀರ್ಣ ಕಡಿಮೆ ಆಗಿರುವುದರ ದುರುಪಯೋಗಪಡಿಸಿಕೊಂಡು ಸದರಿ ಜಮೀನನ್ನು ಹೊಡೆಯುವ ಉದ್ದೇಶದಿಂದ ನಾವು ಒಂದು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಮತ್ತು ಅದಕ್ಕೆ ಸಹಾಯವಾಗಲಿ ಎಂದು ನಾಣು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ